# ಶಿಕ್ಷಕರ ಬಾಳು ಬೆಳಗಿದ ಬಸವರಾಜ ಹೊರಟ್ಟಿ

## ■ಹೊರಟ್ಟಿಯವರಿಗೆ ಮಂತ್ರಾಲಯಂ ಪರಿಮಳ ಪ್ರಶಸ್ತಿ



**ಪ್ರಜಾಪಥ ವಾರ್ತೆ**

**ಹುಬ್ಬಳ್ಳಿ: ವಿಧಾನಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿಯವರು ಶ್ರೀ ಕ್ಷೇತ್ರ ಮಂತ್ರಾಲಯದ ವತಿಯಿಂದ ಸಾಧಕರಿಗೆ ನೀಡುವ ಪ್ರತಿಷ್ಠಿತ 2022–23ನನೇ ಸಾಲಿನ ಮಂತ್ರಾಲಯಂ ಪರಿಮಳ ಪ್ರಶಸ್ತಿಗೆ ಭಾಜನರಾಗಿದ್ದಾರೆ.**

ಈಚೆಗೆ (ಜ.25) ಶ್ರೀಕ್ಷೇತ್ರ ಮಂತ್ರಾಲಯದಲ್ಲಿ ನಡೆದ ಸಮಾರಂಭದಲ್ಲಿ ಶ್ರೀಕ್ಷೇತ್ರದ ಪೀಠಾಧಿಪತಿ ಶ್ರೀ ಸುಬುದೇಂದ್ರ ತೀರ್ಥ ಶ್ರೀಪಾದಂಗಳವರು ಸಭಾಪತಿ ಬಸವರಾಜ ಹೊರಟ್ಟಿಯವರಿಗೆ ಈ ಪ್ರತಿಷ್ಠಿತ ಪುರಸ್ಕಾರ ಪ್ರದಾನ ಮಾಡಿ ಶ್ರೀ ಗುರು ರಾಘವೇಂದ್ರರ ಆಶೀರ್ವಾದ ಸಮರ್ಪಿಸಿದರು.

ಹೋರಾಟಕ್ಕೆ ಪರ್ಯಾಯ ಹೆಸರೆ ಹೊರಟ್ಟಿ ಎನ್ನುವಂತಹ ನುಡಿ ಕನ್ನಡ ನಾಡಿನೆಲ್ಲೆಡೆ ಪ್ರಚಲಿತದಲ್ಲಿದೆ. ತಮ್ಮ ಅನೇಕ ಹೋರಾಟಗಳ ಮೂಲಕ ಸಭಾಪತಿ ಬಸವರಾಜ ಹೊರಟ್ಟಿಯವರು ಕನ್ನಡ ನಾಡಿನ ಎಲ್ಲ ಶಿಕ್ಷಕರ ಬಾಳನ್ನು ಬೆಳಗಿದ್ದಾರೆ. ಅದರಲ್ಲೂ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಬಗ್ಗೆ, ಅಲ್ಲಿನ ನೌಕರರ ಬಗ್ಗೆ ಹೊರಟ್ಟಿಯವರಿಗೆ ಇನ್ನಿಲ್ಲದ ಪ್ರೀತಿ, ಅಭಿಮಾನ.

ಶಿಕ್ಷಕರ ಕೆಲಸಕ್ಕೆ ಮೊದಲ ಆದ್ಯತೆ ನೀಡುವ ವಿಧಾನ ಪರಿಷತ್ತಿನ ಯಾವುದಾದರೂ ಸದಸ್ಯರಿದ್ದರೆ ಅವರು ಬಸವರಾಜ ಹೊರಟ್ಟಿಯವರು. ಅವರು ಶಿಕ್ಷಕರನ್ನು ಅದೆಷ್ಟು ಪ್ರೀತಿಸಿ, ಗೌರವಿಸುತ್ತಾರೋ ಅದಕ್ಕಿಂತಲೂ ಮಿಗಿ ಲಾಗಿ ಕನ್ನಡ ನಾಡಿನ ಶಿಕ್ಷಕ ಬಳಗವು ಬಸವರಾಜ ಹೊರಟ್ಟಿಯವರನ್ನು ಪ್ರೀತಿಸುತ್ತದೆ ಮತ್ತು ಗೌರವಿಸುತ್ತದೆ. ಕೊನೆ ಪುಟಕ್ಕೆ...

# ಶಿಕ್ಷಕರ ಬಾಳು ಬೆಳಗಿದ ಬಸವರಾಜ ಹೊರಟ್ಟಿ

**ಮೊದಲ ಪುಟದಿಂದ....**

ನಾವು ಕೇಳಿ ತಿಳಿದಂತೆ ಹೊರಟ್ಟಿಯಿಂದ ಉಪಕೃತರಾದ ಶಿಕ್ಷಕರನೇಕರು ತಮ್ಮ ಮಕ್ಕಳಿಗೆ ಹೊರಟ್ಟಿಯವರ ಹೆಸರನ್ನಿಟ್ಟಿರುವುದು ಅವರ ಕಾರ್ಯಕ್ಷಮತೆಗೆ ಸಂದ ಗೌರವವಾಗಿದೆ ಎಂದು ಶ್ರೀಪಾದಂಗಳವರು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.

ಒಬ್ಬ ವ್ಯಕ್ತಿ ಸತತ ಎಂಟು ಬಾರಿ ವಿಧಾನ ಪರಿಷತ್ತನ್ನು ಪ್ರವೇಶಿಸುವುದು ಸಾಮಾನ್ಯದ ಮಾತಲ್ಲ. ತಮ್ಮ ಮತದಾರರನ್ನು ಅಷ್ಟು ಅವಧಿಗೆ ಹಿಡಿದಿಡುವುದು ಸುಲಭದ ಮಾತೂ ಅಲ್ಲ. ಸರಿಸುಮಾರು ಅರ್ಧ ಶತಮಾನಗಳ ಕಾಲ ಹೊರಟ್ಟಿಯವರು ವಿಧಾನಪರಿಷತ್ತಿನಲ್ಲಿ ಇದ್ದಾರೆ ಎಂದ-ರೆ ಅದಕ್ಕೆ ಕಾರಣ ಅವರ ಕೆಲಸದಲ್ಲಿ ಅವರಿಗಿರುವ ಶ್ರದ್ಧೆ ಮತ್ತು ಪ್ರಾಮಾಣಿಕತೆ. ಹೊರಟ್ಟಿಯವರಿಗೆ ಹೊರಟ್ಟಿಯವರೇ ಸಾಟಿ ಎಂದು ಶ್ರೀಪಾದಂಗಳವರು ಹೇಳಿದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿಯವರು ಮೊದಲಿನಿಂದಲೂ ನಾನು ಶ್ರೀ ಗುರು ರಾಯರ ಭಕ್ತನಾಗಿದ್ದೇನೆ. ನನ್ನ ಸಮಾಜಮುಖಿ ಕಾರ್ಯವನ್ನು ಕಂಡು ಇಂದು ಶ್ರೀಮಠದ ವತಿಯಿಂದ ಶ್ರೀ ಸುಬುದೇಂದ್ರತೀರ್ಥ ಶ್ರೀಪಾದಂಗಳವರು ಪ್ರದಾನ ಮಾಡಿದ ಈ ಪ್ರಶಸ್ತಿಯನ್ನು ಸ್ವೀಕರಿಸಿ ಪುನೀತನಾಗಿದ್ದೇನೆ. ನನ್ನ ಜೀವನದ ಕೊನೆಯ ಉಸಿರಿನವರೆಗೂ ಶ್ರೀ ಕ್ಷೇತ್ರದಲ್ಲಿ ಇಂದು ಜರುಗಿದ ಈ ಅಮೃತ ಘಳಿಗೆಯನ್ನು ನಾನೆಂದಿಗೂ ಮರೆಯಲಾರೆ.

ಶ್ರೀ ಗುರುರಾಯರ ಕರುಣೆ, ಆಶೀರ್ವಾದ ನನ್ನ ಮೇಲೆ, ನನ್ನ ಕುಟುಂಬ ವರ್ಗದವರ ಮೇಲೆ ಇದ್ದೇ ಇರುತ್ತದೆ ಎನ್ನುವ ಶ್ರೀಪಾದಂಗಳವರ ನುಡಿಗಳು ನನ್ನನ್ನು ವಿನೀತನನ್ನಾಗಿ ಮಾಡಿವೆ. ಈ ಸಂದರ್ಭದಲ್ಲಿ ಶ್ರೀಪಾದಂಗಳವರ ಮೂಲಕ ನಾನು ಶ್ರೀಗುರು ರಾಯರಲ್ಲಿ ಬೇಡುವುದೇನೆಂದರೆ ಗುರುಗಳ ಕರುಣೆ, ಆಶೀರ್ವಾದ ಈ ನಾಡಿನ ಎಲ್ಲ ಜನರ ಮೇಲೂ ಇದ್ದು ಅವರು ಎಲ್ಲ ತೊಂದರೆಗಳಿಂದ ಮುಕ್ತರಾಗಿ ಕ್ಷೇಮದಿಂದ ಇರುವಂತೆ ನಮ್ಮನ್ನು ರಕ್ಷಿಸಲಿ ಎಂದು ಹೇಳಿದರು.

ಜೀವನದಲ್ಲಿ ಮನುಷ್ಯನಿಗೆ ನೆಮ್ಮದಿ ಇಲ್ಲದಿದ್ದರೆ ಏನಿದ್ದರೇನು? ಇಂದು ಶ್ರೀ ಕ್ಷೇತ್ರದ ಪುಣ್ಯ ಭೂಮಿಗೆ ಬಂದ ತಕ್ಷಣವೇ ನನ್ನ ಆಯಾಸವೆಲ್ಲ ಮಾಯವಾಯಿತು. ಇಲ್ಲಿನ ಭಕ್ತಿಭಾವ ನನ್ನನ್ನು ಮೂಕವಿಸ್ಮಿತನನ್ನಾಗಿ ಮಾಡಿದೆ. ಇಂದಿನ ಈ ಪ್ರಶಸ್ತಿಯನ್ನು ಸ್ವೀಕರಿಸಿದಾಗಿನಿಂದ ಇನ್ನೂ ಹೆಚ್ಚೆಚ್ಚು ಸಮಾಜಮುಖಿ ಕಾರ್ಯ ಮಾಡುವ ಹುಮ್ಮಸ್ಸು ನನ್ನಲ್ಲಿ ಮೂಡಿದೆ. ಇಲ್ಲಿ ಸಿಕ್ಕಷ್ಟು ಆನಂದ, ನೆಮ್ಮದಿ ನನಗೆ ಬೇರೆಲ್ಲೂ ಸಿಕ್ಕಿಲ್ಲ ಎಂದು ಹೇಳಿದರು.

ಈ ವೇಳೆ ಮಾಜಿ ಸಚಿವ ಆರ್. ವಿ. ದೇಶಪಾಂಡೆ, ಸಕ್ಕರೆ ಖಾತೆ ಸಚಿವ ಶಂಕರ ಪಾಟೀಲ ಮುನೇನಕೊಪ್ಪ, ಅಪ್ಪ ಸೇವಾ ಟ್ರಸ್ಟ್‌ನ ಸಂಚಾಲಕ ಡಾ. ಬಸವರಾಜ ಧಾರವಾಡ, ಕೊಪ್ಪಳದ ಪ್ರಾಣೇಶ ಸೇರಿ ಇನ್ನೂ ಅನೇಕ ಗಣ್ಯರು, ಭಕ್ತಗಣ ಇದ್ದರು.